Janathavani 15-03-2022

# ಸಂಕೋಚ ಮೀರಿ ಅಸಮಾನತೆ ನಿವಾರಿಸಿಕೊಳ್ಳಿ

## ಮಹಿಳಾ ದಿನಾಚರಣೆಯಲ್ಲಿ ಇಸ್ರೋ ವಿಜ್ಞಾನಿ ಡಾ. ಟಿ.ಕೆ. ಅನುರಾಧ ಕರೆ

ದಾವಣಗೆರೆ, ಮಾ. 14 - ಮಹಿಳೆಗೆ ಯಾರೂ ಸಮಾನ ಸ್ಥಾನಮಾನವನ್ನು ತರಿದು ಕೊಡುವುದಿಲ್ಲ. ಪ್ರತಿಯೊಂದು ವಲಯದಲ್ಲೂ, ಪ್ರತಿ ಹಂತದಲ್ಲೂ ಎದುರಾಗುವ ಅಸಮಾನತೆ ನಿವಾರಣೆಗೆ ಮಹಿಳೆ ತಾನೇ ಶ್ರಮಿಸಬೇಕಿದೆ ಎಂದು ಇಸ್ರೋ ಕೇಂದ್ರ ಕಚೇರಿಯ ಸ್ಯಾಟ್‌ಕಾಮ್ ಪ್ರೋಗ್ರಾಂನ ಮಾಜಿ ನಿರ್ದೇಶಕಿ ಡಾ. ಟಿ.ಕೆ. ಅನುರಾಧ ಹೇಳಿದ್ದಾರೆ.

ನಗರದ ಬಿ.ಐ.ಇ.ಟಿ.ಯಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಪುರುಷ ರೂಪಿತ ಸಮಾಜದಲ್ಲಿ ಮಹಿಳೆಯರಿಗೆ ಇಂದಿಗೂ ಸಮಾನತೆ ಸಾಧ್ಯವಾಗಿಲ್ಲ. ಅಸಮಾನತೆ ಮನೆಯಿಂದಲೇ ಆರಂಭವಾಗಿ, ಉದ್ಯೋಗ ತಾಣಗಳವರೆಗೂ ಮುಂದುವರೆದಿದೆ. ಇದನ್ನು ನಿವಾರಿಸಲು ಮಹಿಳೆಯರೇ ಮುಂದಾಗಬೇಕು ಎಂದವರು ತಿಳಿಸಿದರು.

ಮಹಿಳೆ ತಗ್ಗಿ ಬಗ್ಗಿ ನಡೆದುಕೊಳ್ಳಬೇಕು ಎಂಬುದು ಪುರುಷ ಪ್ರಧಾನ ಸಮಾಜದ ನಿರೀಕ್ಷೆ ಇದೆ. ಇದನ್ನು ಮೀರಿ ನಡೆದವರನ್ನು ಗಂಡುಬೀರಿ ಎಂದು ಜರಿಯುತ್ತಾರೆ. ಆದರೆ, ಉದ್ಯೋಗ ತಾಣಗಳಲ್ಲಿ ಮಹಿಳೆ ಸಂಕೋಚದಿಂದ ಹಿಂದೆ ಸರಿದರೆ, ಉಳಿದವರು ಆತ್ಮವಿಶ್ವಾಸ ತೋರುವ ಸಾಧ್ಯತೆ ಇರುತ್ತದೆ. ಹೀಗಾಗಿ ಮಹಿಳೆ ಹಿಂಜರಿಕೆ ತೋರಬಾರದು ಎಂದು ಅನುರಾಧ ತಿಳಿಸಿದರು.

ಮಗುವಿಗೆ ಶಿಕ್ಷಣ ಕೊಡುವುದರಲ್ಲೂ ಅಸಮಾನತೆ ಇದೆ. [illegible]



### ಮದುವೆ ಗಂಡಿಗಾಗಿ ಪದವಿಯೇ?

ಸಾಮಾಜಿಕ ಕಾರ್ಯಕರ್ತರ ಪರಿಶ್ರಮ ಹಾಗೂ ಸರ್ಕಾರದ ನೀತಿಗಳಿಂದಾಗಿ ಮಹಿಳೆಗೆ ಕಳೆದ ಎರಡು ದಶಕಗಳಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರೆತಿವೆ. ಅದರಲ್ಲೂ ಶಿಕ್ಷಣ ಹಾಗೂ ವೈದ್ಯಕೀಯ ವಲಯಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಿದೆ. ಆದರೆ, ವೈದ್ಯಕೀಯ ಮತ್ತು ಶಿಕ್ಷಣ ಹೊರತು ಪಡಿಸಿ ಬೇರೆ ವಲಯಗಳಲ್ಲಿ ಈಗಲೂ ಉದ್ಯೋಗದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಇದೆ. ಇದನ್ನು ನೋಡಿದಾಗ ಮಹಿಳೆಯನ್ನು ಪದವಿವರೆಗೆ ಓದಿಸುವುದು ಒಳ್ಳೆಯ ಗಂಡ ಸಿಗಲಿ ಎಂಬ ಏಕೈಕ ಕಾರಣಕ್ಕಾ? ಎಂಬ ಪ್ರಶ್ನೆ ಮೂಡುತ್ತದೆ ಎಂದು ಡಾ. ಟಿ.ಕೆ. ಅನುರಾಧ ಪ್ರಶ್ನೆ ಮುಂದಿಟ್ಟರು.

### ಮುತ್ತಿಗೆ ಹಿಡಿದು ಬನ್ನಿ

ಉದ್ಯೋಗ ಬಡ್ತಿ ಪಡೆಯುವಲ್ಲಿ ಮಹಿಳೆಗೆ ಹಲವು ಅಡ್ಡಿಗಳಿವೆ. [illegible] ಎಂದು ಡಾ. ಟಿ.ಕೆ. ಅನುರಾಧ ಹೇಳಿದರು.

[illegible] ಎಂದು ಅನುರಾಧ ತಿಳಿಸಿದರು.

[illegible]

# ಮೀರಿ ಅಸಮಾನತೆ ನಿವಾರಿಸಿಕೊಳ್ಳಿ

(3ನೇ ಪುಟದಿಂದ) ಇರುವಾಗ, ಸಹಜವಾಗಿಯೇ ಹೆಣ್ಣಿನಲ್ಲಿ ಅಭದ್ರತೆಯ ಮನೋಭಾವ ಕಾಡುತ್ತದೆ ಎಂದು ಹೇಳಿದರು.

ಕೆಲಸದ ಸ್ಥಳದಲ್ಲಿ ಗೌರವ ಇಲ್ಲವೇ ಸುರಕ್ಷತೆ ಹೆಸರಿನಲ್ಲಿ ಹೆಣ್ಣನ್ನು ಅಸಮಾನವಾಗಿ ಕಾಣಲು ಬಂದರೆ ಅದನ್ನು ಸೂಕ್ಷ್ಮವಾಗಿ ನಿವಾರಿಸಬೇಕು. ಮನೋಭಾವ ಬದಲಿಸಿಕೊಳ್ಳಲು ಸಹೋದ್ಯೋಗಿಗಳಿಗೆ ತಿಳಿಸಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾದ ಬಾಪೂಜಿ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾತನಾಡಿ, ಅನುರಾಧ ಒಬ್ಬ ಶ್ರೇಷ್ಠ ವಿಜ್ಞಾನಿಯಾಗಿದ್ದು, ವಿದ್ಯಾರ್ಥಿಗಳು ಅವರಿಂದ ಬಹಳ ಕಲಿಯಬೇಕಿದೆ ಎಂದು ಹೇಳಿದರು.

ಬೆಳಗಾವಿ ವಿ.ಟಿ.ಯು. ಮೌಲ್ಯಮಾಪನ ಕುಲಸಚಿವ ಡಾ. ಬಿ.ಇ. ರಂಗಸ್ವಾಮಿ, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಬಾಪೂಜಿ ವಿದ್ಯಾಸಂಸ್ಥೆ ಉಪಾಧ್ಯಕ್ಷೆ ಕಿರುವಾಡಿ ಗಿರಿಜಮ್ಮ, ಕಿರಣ್ ವಿಶ್ವೇಶ್ವರಯ್ಯ ಉಪಸ್ಥಿತರಿದ್ದರು.

ಬಿಐಇಟಿ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ ಅಧ್ಯಕ್ಷತೆ ವಹಿಸಿದ್ದರು. ಡಾ. ವೀಣಾ ಕುಮಾರ್ ಆದಿ ಪ್ರಾರ್ಥಿಸಿದರು. ಡಾ. ಸಿ. ಆರ್. ನಿರ್ಮಲ ಸ್ವಾಗತಿಸಿದರು. ಡಿ.ವಿ. ಪ್ರಿಯಾಂಕ ಹಾಗೂ ವಿ. ಪ್ರಿಯ ನಿರೂಪಿಸಿದರೆ, ಎಸ್.ಹೆಚ್. ವಿಜಯಲಕ್ಷ್ಮಿ ವಂದಿಸಿದರು.

# ಬಿಐಇಟಿ ಕಾಲೇಜಿನ ಇಂದಿನ ಮಹಿಳಾ ದಿನಾಚರಣೆಗೆ ಇಸ್ರೋ ವಿಜ್ಞಾನಿ ಡಾ. ಅನುರಾಧ

Janathavani 14-03-2022

ದಾವಣಗೆರೆಯ ಬಿಐಇಟಿಯಲ್ಲಿ ಅಂತರರಾಷ್ಟ್ರೀಯ - ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಇಂದು ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಇಸ್ರೋ ವಿಜ್ಞಾನಿ ಡಾ. ಟಿ.ಕೆ. ಅನುರಾಧ ಅವರು ಇಂದು ಆಗಮಿಸಲಿದ್ದಾರೆ.



**ಸಂಕ್ಷಿಪ್ತ ಪರಿಚಯ :** ಡಾ. ಅನುರಾಧಾ ಟಿ.ಕೆ ಅವರು ವಿಜ್ಞಾನಕ್ಕೆ ಸಂಬಂಧಿಸಿದ ಕ್ಷೇತ್ರಗಳತ್ತ ಒಲವು ಹೊಂದಿರುವ ಕ್ರಿಯಾತ್ಮಕ ಮಹಿಳೆ ಮತ್ತು ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋದಲ್ಲಿ ಉನ್ನತ ಸ್ಥಾನಕ್ಕೆ ಏರಿದವರಲ್ಲಿ ಒಬ್ಬರಾಗಿದ್ದಾರೆ. ಅವರು 1982 ರಲ್ಲಿ ಇಸ್ರೋಗೆ ಸೇರಿದರು ಮತ್ತು ತಮ್ಮ ಕಾರ್ಯದಕ್ಷತೆಯಿಂದ ಇಸ್ರೋದಲ್ಲಿ ಒಬ್ಬ ಅತ್ಯಂತ ಹಿರಿಯ ಮಹಿಳಾ ವಿಜ್ಞಾನಿಯಾಗಿದ್ದಾರೆ.

1960 ರಲ್ಲಿ ಕರ್ನಾಟಕದಲ್ಲಿ ಜನಿಸಿದ ಅವರು, 1982 ರಲ್ಲಿ ಬೆಂಗಳೂರಿನ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್‌ನಿಂದ ಎಲೆಕ್ಟ್ರಾನಿಕ್ಸ್‌ನಲ್ಲಿ ಪದವಿ ಪಡೆದರು. ಇಸ್ರೋ ಉಪಗ್ರಹ ಕೇಂದ್ರದಲ್ಲಿ ಭಾರತೀಯ ಜಿಯೋಸ್ಟಾಟ್ ಕಾರ್ಯಕ್ರಮದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರು ಜಿಯೋ-ಸಿಂಕ್ರೊನಸ್ ಉಪಗ್ರಹಗಳ ಪ್ರದೇಶದಲ್ಲಿ ಕೆಲಸ ಮಾಡಿದ್ದಾರೆ. ಇದು ಟೆಲಿಕಾಂ ಮತ್ತು ಡೇಟಾ ಲಿಂಕ್‌ಗಳಿಗೆ ನಿರ್ಣಾಯಕವಾಗಿದೆ.

ಇಸ್ರೋದಲ್ಲಿ ಯೋಜನಾ ನಿರ್ದೇಶಕಿಯಾಗಿ, ಅವರು GSAT-9, GSAT-17 ಮತ್ತು GSAT-18 ಸಂವಹನ ಉಪಗ್ರಹಗಳ ಉಡಾವಣೆಯ ಮೇಲ್ವಿಚಾರಣೆ ಮಾಡಿದ್ದರು. ಅವರು ಪ್ರಾಜೆಕ್ಟ್ ಮ್ಯಾನೇಜರ್, ಡೆಪ್ಯೂಟಿ ಪ್ರಾಜೆಕ್ಟ್ ಡೈರೆಕ್ಟರ್ ಮತ್ತು ಇಂಡಿಯನ್ ರಿಮೋಟ್ ಸೆನ್ಸಿಂಗ್ ಮತ್ತು ಇಂಡಿಯನ್ ರೀಜನಲ್ ನ್ಯಾವಿಗೇಶನ್ ಸ್ಯಾಟಲೈಟ್ ಸಿಸ್ಟಮ್ ಕಾರ್ಯಕ್ರಮಗಳಿಗಾಗಿ ಅಸೋಸಿಯೇಟ್ ಪ್ರಾಜೆಕ್ಟ್ ಡೈರೆಕ್ಟರ್ ಸಾಮರ್ಥ್ಯದಲ್ಲಿ ಕೆಲಸ ಮಾಡಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಯ ಇತ್ತೀಚಿನ ಸಂವಹನ ಉಪಗ್ರಹದ ಯೋಜನಾ ನಿರ್ದೇಶಕರಾಗಿ, ಅನುರಾಧ ಅವರು ಹಾಸನದ ನಿಯಂತ್ರಣ ಸೌಲಭ್ಯದಿಂದ ಕಾರ್ಯಗತಗೊಳಿಸಿದ ಸಂಕೀರ್ಣ ಕಾರ್ಯಾಚರಣೆಗಳ ಮೂಲಕ GSAT-12 ಅನ್ನು ಅದರ ಅಂತಿಮ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿ ನಿರ್ವಹಿಸಿದರು.

ಅನುರಾಧ ಅವರು 'ಇಸ್ರೋ ಪರ್ಫಾರ್ಮೆನ್ಸ್ ಎಕ್ಸಲೆನ್ಸ್ ಅವಾರ್ಡ್-2019', ಏರೋ ಇಂಡಿಯಾದ 'ವುಮೆನ್ ಅಚೀವರ್ ಇನ್ ಏರೋಸ್ಪೇಸ್-2019', ಆಸ್ಟ್ರೊನಾಟಿಕಲ್ ಸೊಸೈಟಿ ಆಫ್ ಇಂಡಿಯಾದ 'ಸ್ಪೇಸ್ ಸಿಸ್ಟಮ್ಸ್ ಮ್ಯಾನೇಜ್‌ಮೆಂಟ್ ಅವಾರ್ಡ್-2016' ಮತ್ತು ಇನ್ನೂ ಹಲವು ವೃತ್ತಿಪರ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯವು 2018 ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

- ಡಾ. ಪೂರ್ಣಿಮಾ ಬಿ.
ಬಿಐಇಟಿ, ದಾವಣಗೆರೆ.

ಇಸ್ರೋ ವಿಜ್ಞಾನಿ ಡಾ.ಟಿ.ಕೆ. ಅನುರಾಧಾ ಸಲಹೆ | ಬಿಐಇಟಿಯಲ್ಲಿ ಮಹಿಳಾ ದಿನಾಚರಣೆ

vijayavani 15-03-2022

# ಸಂಕೋಚ ಬಿಟ್ಟರೆ ಬದುಕು ಉಜ್ವಲ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಮಹಿಳೆಯರು ಸಂಕೋಚ, ಹಿಂಜರಿಕೆ ಸ್ವಭಾವ ಬಿಟ್ಟು ಧೈರ್ಯವಾಗಿ ಮುನ್ನುಗ್ಗುವ ಅಗತ್ಯವಿದೆ ಎಂದು ಇಸ್ರೋ ವಿಜ್ಞಾನಿ ಡಾ.ಟಿ.ಕೆ. ಅನುರಾಧಾ ಪ್ರತಿಪಾದಿಸಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದ ಸಂವಿಧಾನದಲ್ಲಿ ಸಮಾನತೆಯ ಬಗ್ಗೆ ಹೇಳಲಾಗಿದೆ. ಹಲವು ಕಾನೂನುಗಳನ್ನೂ ರೂಪಿಸಲಾಗಿದೆ. ಆದರೆ ಸಮಾಜ ಮಹಿಳೆಯರನ್ನು ನೋಡುವ ದೃಷ್ಟಿಕೋನ ಬದಲಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಮಹಿಳೆಯರು ಯಾರನ್ನೂ ಅವಲಂಬಿಸದೆ, ತಾವೂ ಸಮರ್ಥರು ಎಂಬುದನ್ನು ನಿರೂಪಿಸುತ್ತಲೇ ಭವಿಷ್ಯದ ದಾರಿಯನ್ನು ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪುರುಷ ಪ್ರಧಾನ ಸಮಾಜದಲ್ಲಿ ಮನೆಯಿಂದಲೇ ಅಸಮಾನತೆ ಶುರುವಾಗುತ್ತದೆ. ಮಕ್ಕಳಿಗೆ ಯಾವ ಆಟಿಕೆ ಕೊಡಬೇಕು ಎಂಬ ವಿಚಾರದಲ್ಲೇ ಗಂಡು-ಹೆಣ್ಣು ಎಂಬ ಭೇದ ಭಾವ ಮಾಡಲಾಗುತ್ತದೆ. ಹೆಣ್ಣು ಮಗುವಿಗೆ ಗೊಂಬೆ ತಂದುಕೊಟ್ಟರೆ, ಗಂಡು ಮಗುವಿಗೆ ಆಟಿಕೆಯ ಕಾರು ನೀಡಲಾಗುತ್ತದೆ. ಈ ಮನಸ್ಥಿತಿ ಬದಲಾಗಬೇಕು ಎಂದರು.

ಮನೆಗೆಲಸದ ಮಹಿಳೆ ತನ್ನೊಂದಿಗೆ ಗಂಡು ಮಗನನ್ನು ಕೆಲಸಕ್ಕೆ ಕರೆತಂದಿದ್ದನ್ನು ತಾವು ನೋಡಿಲ್ಲ, ಸಾಮಾನ್ಯವಾಗಿ ಹೆಣ್ಣು ಮಕ್ಕಳನ್ನೇ ಜತೆಗೆ ಕರೆದುಕೊಂಡು ಬರುತ್ತಾಳೆ ಎಂದು ಉದಾಹರಣೆ ನೀಡಿದರು.

ಹೆಚ್ಚು ಸಂಖ್ಯೆಯ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಸರ್ಕಾರದ ನೀತಿಗಳೂ ಅದಕ್ಕೆ ಪೂರಕವಾಗಿವೆ. ಆದರೆ ಪದವಿ ಪಡೆದ ನಂತರ ಉದ್ಯೋಗಕ್ಕೆ ಸೇರುವ ಮಹಿಳೆಯರ ಸಂಖ್ಯೆ ಬಹಳ ಕಡಿಮೆಯಾಗಿದೆ ಎಂದು ತಿಳಿಸಿದರು.

ವರದಕ್ಷಿಣೆ ಸಾವು, ಕಿರುಕುಳದ ಪ್ರಕರಣಗಳು ಈಗಲೂ ಇವೆ. ಮಹಿಳಾ ಸುರಕ್ಷತೆಯ ಪ್ರಶ್ನೆ ಕಾಡುತ್ತದೆ. ಉದ್ಯೋಗ ಪಡೆಯುವ ಸಂದರ್ಭದಲ್ಲಿ ಸ್ತ್ರೀ-ಪುರುಷ ತಾರತಮ್ಯ ಇರುವುದಿಲ್ಲ, ಕ್ರಮೇಣ ಅದು ಕಾಣಿಸಿಕೊಳ್ಳುತ್ತದೆ. ವೃತ್ತಿಯಲ್ಲಿ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂದು ವಿಷಾದಿಸಿದರು.

ಮಹಿಳೆಯರಲ್ಲಿ ಕ್ಷಮತೆ ಇದ್ದರೂ, ನಾಯಕತ್ವ ವಹಿಸಿಕೊಳ್ಳುವವರ ಸಂಖ್ಯೆ ಕಡಿಮೆಯಿದೆ. ಯಾವುದೇ ಕಂಪನಿಗಳಲ್ಲಿ ಸಿಇಒ ಅಥವಾ ಎಂ.ಡಿ. ಹುದ್ದೆ ಏರಿದ ಸ್ತ್ರೀಯರು ಶೇ. 4-5 ರಷ್ಟಿರಬಹುದು. ಬೋರ್ಡ್‌ಗಳ ಸದಸ್ಯರಾದವರೂ ವಿರಳ ಎಂದು ತಿಳಿಸಿದರು.

ಬಾಪೂಜಿ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ, ಕಿರುವಾಡಿ ಗಿರಿಜಮ್ಮ, ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಕುಲಸಚಿವ ಡಾ.ಬಿ.ಇ. ರಂಗಸ್ವಾಮಿ, ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ, ಮಹಿಳಾ ಕೋಶದ ಡೀನ್ ಪ್ರೊ.ಎಂ.ಇ. ಆಶಾಲತಾ, ಕಿರಣ್ ವಿಶ್ವೇಶ್ವರಯ್ಯ ಇದ್ದರು. ಪ್ರಾಧ್ಯಾಪಕಿ ಡಾ ಸಿ.ಆರ್. ನಿರ್ಮಲಾ ಸ್ವಾಗತಿಸಿದರು. ಡಾ.ಬಿ. ಪೂರ್ಣಿಮಾ ಅತಿಥಿಗಳನ್ನು ಪರಿಚಯಿಸಿದರು. ಎಸ್.ಎಚ್. ವಿಜಯಲಕ್ಷ್ಮಿ ವಂದಿಸಿದರು. ಡಾ. ವೀಣಾ ಕುಮಾರ್ ಪ್ರಾರ್ಥಿಸಿದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಸೋಮವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಇಸ್ರೋ ವಿಜ್ಞಾನಿ ಡಾ.ಟಿ.ಕೆ. ಅನುರಾಧಾ, ಡಾ. ಪ್ರಭಾ ಮಲ್ಲಿಕಾರ್ಜುನ, ಕಿರುವಾಡಿ ಗಿರಿಜಮ್ಮ, ಡಾ.ಬಿ.ಇ. ರಂಗಸ್ವಾಮಿ, ಪ್ರೊ. ವೈ. ವೃಷಭೇಂದ್ರಪ್ಪ, ಡಾ.ಎಚ್.ಬಿ. ಅರವಿಂದ, ಪ್ರೊ.ಎಂ.ಇ. ಆಶಾಲತಾ, ಕಿರಣ್ ವಿಶ್ವೇಶ್ವರಯ್ಯ ಇದ್ದರು.

■ 7 ದಶಕದಲ್ಲಿ ಶಿಕ್ಷಣ, ವೈದ್ಯಕೀಯ ವಲಯದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಳ

samyuktha karnataka 15-03-2022

# ಮಹಿಳಾ ಪ್ರಾತಿನಿಧ್ಯ ಹೆಚ್ಚಿದೆ



ದಾವಣಗೆರೆ ಬಿಐಇಟಿಯಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಇಸ್ರೋ ಕೇಂದ್ರ ಕಚೇರಿಯ ಸ್ಯಾಟ್‌ಕಾಮ್ ಪ್ರೋಗ್ರಾಂನ ಮಾಜಿ ನಿರ್ದೇಶಕಿ ಡಾ. ಟಿ.ಕೆ. ಅನುರಾಧ, ಡಾ. ಎಚ್.ಬಿ. ಅರವಿಂದ, ಡಾ. ಪ್ರಭಾ ಮಲ್ಲಿಕಾರ್ಜುನ, ಡಾ. ಬಿ.ಇ. ರಂಗಸ್ವಾಮಿ, ಪ್ರೊ.ವೈ. ವೃಷಭೇಂದ್ರಪ್ಪ, ಕಿರುವಾಡಿ ಗಿರಿಜಮ್ಮ ಇದ್ದರು.

"ಮಹಿಳೆಗೆ ಯಾರೂ ಸಮಾನ ಸ್ಥಾನಮಾನ ಕರೆದು ಕೊಡುವುದಿಲ್ಲ. ಪ್ರತಿಯೊಂದು ವಲಯದಲ್ಲೂ, ಪ್ರತಿ ಹಂತದಲ್ಲೂ ಎದುರಾಗುವ ಅಸಮಾನತೆ ನಿವಾರಣೆಗೆ ಮಹಿಳೆ ತಾನೇ ಶ್ರಮಿಸಬೇಕಿದೆ. ಕೆಲಸದ ಸ್ಥಳದಲ್ಲಿ ಗೌರವ ಇಲ್ಲವೇ ಸುರಕ್ಷತೆ ಹೆಸರಿನಲ್ಲಿ ಹೆಣ್ಣನ್ನು ಅಸಮಾನತೆಯಿಂದ ಕಂಡರೆ ಅದನ್ನು ಸೂಕ್ಷ್ಮವಾಗಿ ನಿವಾರಿಸಬೇಕು.-

■ ಡಾ. ಟಿ.ಕೆ.ಅನುರಾಧ.

ದಾವಣಗೆರೆ: ಸಾಮಾಜಿಕ ಕಾರ್ಯಕರ್ತರ ಪರಿಶ್ರಮ ಹಾಗೂ ಸರ್ಕಾರದ ನೀತಿಗಳಿಂದಾಗಿ ಮಹಿಳೆಗೆ ಕಳೆದ ಏಳು ದಶಕಗಳಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರೆತಿವೆ. ಆದರಲ್ಲೂ ಶಿಕ್ಷಣ ಹಾಗೂ ವೈದ್ಯಕೀಯ ವಲಯಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಿದೆ. ಆದರೆ, ಬೇರೆ ವಲಯಗಳಲ್ಲಿ ಈಗಲೂ ಮಹಿಳಾ ಪ್ರಾತಿನಿಧ್ಯ ಕಡಿಮೆ ಇದೆ ಎಂದು ಇಸ್ರೋ ಕೇಂದ್ರ ಕಚೇರಿಯ ಸ್ಯಾಟ್‌ಕಾಮ್ ಪ್ರೋಗ್ರಾಂನ ಮಾಜಿ ನಿರ್ದೇಶಕಿ ಡಾ. ಟಿ.ಕೆ. ಅನುರಾಧ ಹೇಳಿದರು. ನಗರದ ಬಿಐಇಟಿಯಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಇದನ್ನೆಲ್ಲ ನೋಡಿದಾಗ ಮಹಿಳೆಯನ್ನು ಪದವಿಯವರೆಗೆ ಓದಿಸುವುದು ಒಳ್ಳೆಯ ಗಂಡ ಸಿಗಲಿ ಎಂಬ ಏಕೈಕ ಕಾರಣಕ್ಕೆ ಎಂಬ ಪ್ರಶ್ನೆ ಮೂಡುತ್ತದೆ ಎಂದರು.

ಉನ್ನತ ಕಲಿಕೆ ವಿಷಯ ಬಂದಾಗಲೂ ಹೆಣ್ಣಿನ ಆಯ್ಕೆಗಳು ಸೀಮಿತವಾಗುತ್ತವೆ. ಶೇ.50ಕ್ಕೂ ಹೆಚ್ಚು ಹೆಣ್ಣು ಮಕ್ಕಳು ಪದವಿ ಪಡೆಯುತ್ತಿದ್ದರೂ ಸಹ, ಕೆಲಸಕ್ಕೆ ಬರುವವರು ಕಡಿಮೆ. ಕೆಲಸಕ್ಕೆ ಸೇರಿದವರಲ್ಲಿಯೂ ಉನ್ನತ ಹುದ್ದೆಗೆ ಬರುವವರ ಪ್ರಮಾಣ ಶೇ.10ಕ್ಕೂ ತಲುಪಿಲ್ಲ ಎಂದರು. ಸುಶಿಕ್ಷಿತ ಸಮಾಜದಲ್ಲಿದ್ದರೂ ಹೆಣ್ಣು ಮಕ್ಕಳ ಸುರಕ್ಷತೆ ಬಗ್ಗೆ ಕಳವಳ ತಪ್ಪಿಲ್ಲ. ಸಂಜೆ ಮಗಳು ವಾಪಸ್ ಬರುವುದು ಕೆಲವು ನಿಮಿಷ ತಡವಾದರೂ ತಾಯಂದಿರಿಗೆ ತಳಮಳ ಆರಂಭವಾಗುತ್ತದೆ. ಇಂತಹ ಸಾಮಾಜಿಕ ಸ್ಥಿತಿ ಇರುವಾಗ, ಸಹಜವಾಗಿಯೇ ಹೆಣ್ಣಿನಲ್ಲಿ ಅಭದ್ರತೆಯ ಮನೋಭಾವ ಕಾಡುತ್ತದೆ ಎಂದು ತಿಳಿಸಿದರು.

ಪುರುಷನೇ ರೂಪಿಸಿದ ಸಮಾಜದಲ್ಲಿ ಮಹಿಳೆಯರಿಗೆ ಇಂದಿಗೂ ಸಮಾನತೆ ಸಾಧ್ಯವಾಗಿಲ್ಲ. ಅಸಮಾನತೆ ಮನೆಗಳಿಂದಲೇ ಆರಂಭವಾಗಿ, ಉದ್ಯೋಗ ತಾಣಗಳವರೆಗೂ ಮುಂದುವರಿದಿದೆ. ಇದನ್ನು ನಿವಾರಿಸಲು ಮಹಿಳೆಯರೇ ಶ್ರಮಿಸಬೇಕು. ಮನೆ ಸಮಾಜದ ಮೂಲ ಘಟಕ. ಮಕ್ಕಳಿಗೆ ಯಾವ ಆಟಿಕೆ ಕೊಡಬೇಕು ಎಂಬುದರಿಂದಲೇ ಗಂಡು - ಹೆಣ್ಣಿನ ಭೇದ ಆರಂಭವಾಗುತ್ತದೆ. ಗಂಡು ಮಗುವಿಗೆ ಕಾರಿನಂತಹ ಆಟಿಕೆ ಕೊಟ್ಟರೆ, ಹೆಣ್ಣು ಮಗುವಿಗೆ ಅಲಂಕಾರದ ಹೆಣ್ಣು ಗೊಂಬೆಯನ್ನು ನೀಡಲಾಗುತ್ತದೆ ಎಂದರು. ಬಿಐಇಟಿ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ಅಧ್ಯಕ್ಷತೆ ವಹಿಸಿದ್ದರು. ಬಿಐಇಟಿ ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ, ಬೆಳಗಾವಿ ವಿಟಿಯು ಮೌಲ್ಯಮಾಪನ ರಿಜಿಸ್ಟ್ರಾರ್ ಡಾ. ಬಿ.ಇ.ರಂಗಸ್ವಾಮಿ, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ಕಿರಣ್ ಇದ್ದರು.

ಡಾ. ವೀಣಾಕುಮಾರ್ ಆದಿ ಪ್ರಾರ್ಥಿಸಿದರು. ಡಾ. ಸಿ.ಆರ್. ನಿರ್ಮಲ ಸ್ವಾಗತಿಸಿದರು. ಡಿ.ವಿ. ಪ್ರಿಯಾಂಕ ಹಾಗೂ ವಿ. ಪ್ರಿಯ ನಿರೂಪಿಸಿದರು. ಎಸ್.ಎಚ್. ವಿಜಯಲಕ್ಷ್ಮಿ ವಂದಿಸಿದರು.

ಜನತಾವಾಣಿ 15-03-2022

# ಸ್ತ್ರೀ ಅಸಮಾನತೆ ಇನ್ನೂ ಕಡಿಮೆಯಾಗಿಲ್ಲ ಸುರಕ್ಷತೆ ಕಳವಳ ತಪ್ಪಿಲ್ಲ: ಅನುರಾಧ



ದಾವಣಗೆರೆ,ಮಾ.14: ಸಮಾಜದ ಪ್ರತಿಯೊಂದು ವಲಯಗಳಲ್ಲೂ ಅಸಮಾನತೆ ಬೇರೂರಿದ್ದು, ಇಂದಿಗೂ ಮಹಿಳಾ ಸಮಾನತೆ ಸಾಧ್ಯವಾಗಿಲ್ಲ ಎಂದು ಇಸ್ರೋ ಕೇಂದ್ರ ಕಚೇರಿಯ ಸ್ಯಾಟ್‌ಕಾಮ್ ಪ್ರೋಗ್ರಾಂನ ಮಾಜಿ ನಿರ್ದೇಶಕಿ ಡಾ. ಟಿ.ಕೆ.ಅನುರಾಧ ವಿಷಾದ ವ್ಯಕ್ತಪಡಿಸಿದರು.

ನಗರದ ಬಿಐಇಟಿ ಕಾಲೇಜಿನಲ್ಲಿ ಸೋಮವಾರ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಮನೆಗಳಿಂದ ಹಿಡಿದು ಉದ್ಯೋಗ ತಾಣಗಳವರೆಗೆ ಅಸಮಾನತೆ ಮುಂದುವರೆದಿದೆ. ಮಕ್ಕಳಿಗೆ ಮನೆಯಲ್ಲಿ ಆಟಿಕೆ ಕೊಡುವುದರಿಂದ ಆರಂಭಗೊಳ್ಳುವ ಗಂಡು-ಹೆಣ್ಣಿನ ಭೇದ ಸಮಾಜದ ಎಲ್ಲ ವಲಯಗಳಲ್ಲೂ ವ್ಯಾಪಿಸಿದೆ ಎಂದು ಹೇಳಿದರು.

ಇಂದು ಶೇ.50ಕ್ಕೂ ಹೆಚ್ಚು ಹೆಣ್ಣುಮಕ್ಕಳು ಪದವಿ ಪಡೆಯುತ್ತಿದ್ದರೂ ಉದ್ಯೋಗಕ್ಕೆ ಬರುವವರ ಸಂಖ್ಯೆ ಕಡಿಮೆ ಇದೆ. ಕೆಲಸಕ್ಕೆ ಸೇರಿದವರಲ್ಲಿಯೂ ಉನ್ನತ ಸ್ಥಾನಕ್ಕೆ ಬರುವವರ ಪ್ರಮಾಣ ಶೇ.10ಕ್ಕೂ ತಲುಪಿಲ್ಲ ಎಂದ ಅವರು, ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಲ್ಲೂ ಅಸಮಾನತೆಯಿದ್ದು, ಉನ್ನತ ಶಿಕ್ಷಣದ ವಿಷಯದಲ್ಲಿ ಅವರ ಆಯ್ಕೆಗಳು ಸೀಮಿತವಾಗಿವೆ ಎಂದು ತಿಳಿಸಿದರು.

ಸರ್ಕಾರದ ನೀತಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರ ಪರಿಶ್ರಮದಿಂದಾಗಿ ಮಹಿಳೆಯರಿಗೆ ಕಳೆದ ಏಳು ದಶಕಗಳಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರೆತಿವೆ. ಅದರಲ್ಲೂ ಶಿಕ್ಷಣ ಹಾಗೂ ವೈದ್ಯಕೀಯ ವಲಯಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಿದೆ. ಆದರೆ ಬೇರೆ ವಲಯಗಳಲ್ಲಿ ಈಗಲೂ ಮಹಿಳಾ ಪ್ರಾತಿನಿಧ್ಯ ಕಡಿಮೆ ಇದೆ. ಒಳ್ಳೆಯ ವರ ಸಿಗಲಿ ಎಂಬ ಕಾರಣಕ್ಕಾಗಿ ಮಹಿಳೆಯರನ್ನು ಪದವಿಯವರೆಗೆ ಓದಿಸಲಾಗುತ್ತದೆಯಾ ಎಂಬ ಪ್ರಶ್ನೆ ಮೂಡುತ್ತದೆ ಎಂದು ಹೇಳಿದರು.

ಸುಶಿಕ್ಷಿತ ಸಮಾಜದಲ್ಲಿದ್ದರೂ ಹೆಣ್ಣು ಮಕ್ಕಳ ಸುರಕ್ಷತೆ ಬಗ್ಗೆ ಕಳವಳ ತಪ್ಪಿಲ್ಲ ಇಂತಹ ಸಾಮಾಜಿಕ ಸ್ಥಿತಿಯಲ್ಲಿ ಸಹಜವಾಗಿಯೆ ಮಹಿಳೆಯರಲ್ಲಿ ಅಭದ್ರತೆ ಮನೋಭಾವ ಕಾಡುತ್ತಿದೆ ಎಂದ ಅವರು, ಸಮಾಜದ ಪ್ರತಿಯೊಂದು ವಲಯದಲ್ಲೂ ಇರುವ ಅಸಮಾನತೆ ನಿವಾರಣೆಗೆ ಮಹಿಳೆಯರೇ ಶ್ರಮಿಸಬೇಕು. ಉದ್ಯೋಗದ ಸ್ಥಳದಲ್ಲಿ ಸುರಕ್ಷತೆ ಹೆಸರಿನಲ್ಲಿ ಮಹಿಳೆಯರನ್ನು ಅಸಮಾನವಾಗಿ ಕಾಣಲು ಬಂದರೆ ಅದನ್ನು ಸೂಕ್ಷ್ಮವಾಗಿ ನಿವಾರಿಸಬೇಕು ಎಂದು ತಿಳಿಸಿದರು.

ಬಿಇಎ ಆಡಳಿತ ಮಂಡಳಿ ಸದಸ್ಯೆ ಡಾ.ಪ್ರಭಾ ಮಲ್ಲಿಕಾರ್ಜುನ್, ಬೆಳಗಾವಿ ವಿಟಿಯು ಮೌಲ್ಯಾಂಕನ ರಿಜಿಸ್ಟ್ರಾರ್ ಡಾ. ಬಿ.ಇ.ರಂಗಸ್ವಾಮಿ, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ಕಿರಣ್ ವಿಶ್ವೇಶ್ವರಯ್ಯ ಉಪಸ್ಥಿತರಿದ್ದರು. ಬಿಐಇಟಿ ಪ್ರಾಂಶುಪಾಲ ಡಾ. ಹೆಚ್.ಬಿ.ಅರವಿಂದ್ ಅಧ್ಯಕ್ಷತೆ ವಹಿಸಿದ್ದರು.

ಡಾ. ಸಿ.ಆರ್.ನಿರ್ಮಲ ಸ್ವಾಗತಿಸಿದರು. ಡಿ.ಎ.ಪ್ರಿಯಾಂಕ ಹಾಗೂ ಎ.ಪ್ರಿಯಾ ನಿರೂಪಿಸಿದರು.

ದುಗ್ಗಮ್ಮನ ಹಬ್ಬ

15-03-2022

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿದ ಇಸ್ರೊ ಮಾಜಿ ನಿರ್ದೇಶಕಿ ಡಾ. ಟಿ.ಕೆ. ಅನುರಾಧಾ

# ಮಹಿಳೆಗೆ ಎಲ್ಲ ರಂಗಗಳಲ್ಲಿ ಪ್ರಾತಿನಿಧ್ಯ ಅಗತ್ಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸಮಾಜದಲ್ಲಿ ಮಹಿಳೆಗೆ ಸಲ್ಲಬೇಕಾದ ಗೌರವ ಮತ್ತು ಸಮಾನತೆ ದೊರೆಯಬೇಕಾದರೆ ಎಲ್ಲ ರಂಗಗಳಲ್ಲೂ ಮಹಿಳೆಗೆ ಪ್ರಾತಿನಿಧ್ಯ ಅಗತ್ಯ. ಪ್ರತಿ ಹಂತದಲ್ಲೂ ಎದುರಾಗುವ ಅಸಮಾನತೆ ನಿವಾರಣೆಗೆ ಮಹಿಳೆಯೇ ಶ್ರಮಿಸಬೇಕು ಎಂದು ಇಸ್ರೊ ಕೇಂದ್ರ ಕಚೇರಿಯ ಸ್ಯಾಟ್‌ಕಾಮ್ ಪ್ರೋಗ್ರಾಂನ ಮಾಜಿ ನಿರ್ದೇಶಕಿ ಡಾ. ಟಿ.ಕೆ. ಅನುರಾಧಾ ತಿಳಿಸಿದರು.

ನಗರದ ಬಿಐಇಟಿಯಲ್ಲಿ ಕಾಲೇಜಿನ ವುಮೆನ್ಸ್ ಸೆಲ್‌ನಿಂದ ಏರ್ಪಡಿಸಿದ್ದ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಕೆಲವು ರಂಗಗಳಲ್ಲಷ್ಟೇ ಮಹಿಳೆಗೆ ಸಮಾನತೆ ಸಿಕ್ಕಿದೆ. ಎಲ್ಲ ಕಡೆಗಳಲ್ಲಿ ಸಮಾನತೆ ಪಡೆಯಲು ಪುರುಷ ಪ್ರಧಾನ ಸಮಾಜದಲ್ಲಿ ಇನ್ನೂ

**ಮುಖ್ಯಾಂಶಗಳು**

- ಸಂಸ್ಕೃತಿ ಹೆಸರಲ್ಲಿ ಹೆಣ್ಣಿಗೆ ಸಿಗದ ಸಮಾನತೆ
- ಶಿಕ್ಷಣದಲ್ಲೂ ಮಹಿಳೆಗೆ ತಾರತಮ್ಯ
- ಸುಶಿಕ್ಷಿತ ಸಮಾಜದಲ್ಲಿದ್ದರೂ ಸುರಕ್ಷತೆಯ ಕಳವಳ

ಸಾಧ್ಯವಾಗಿಲ್ಲ. ಮಹಿಳೆಗೆ ಯಾರೂ ಸಮಾನ ಸ್ಥಾನಮಾನವನ್ನು ಕರೆದು ಕೊಡುವುದಿಲ್ಲ. ಸುರಕ್ಷತೆಯ ಹೆಸರಲ್ಲಿ, ಸಂಸ್ಕೃತಿ, ಗೌರವದ ಹೆಸರಲ್ಲಿ ಹೆಣ್ಣನ್ನು ಕಡಿಮೆ ದರ್ಜೆಯಲ್ಲೇ ಕಾಣಲಾಗುತ್ತದೆ. ಕೆಲಸದ ಸ್ಥಳಗಳಲ್ಲಿ ಇಂಥ ಮನೋಭಾವವನ್ನು ಬದಲಾಯಿಸಲು ಸೂಕ್ಷ್ಮವಾಗಿ ಸಹೋದ್ಯೋಗಿಗಳಿಗೆ ತಿಳಿಸಬೇಕು ಎಂದು ಸಲಹೆ ನೀಡಿದರು.

'ಮನೆಯಿಂದಲೇ ಈ ಅಸಮಾನತೆ



ದಾವಣಗೆರೆ ಬಿಐಇಟಿಯಲ್ಲಿ ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇಸ್ರೊ ಕೇಂದ್ರ ಕಚೇರಿಯ ಸ್ಯಾಟ್‌ಕಾಮ್ ಪ್ರೋಗ್ರಾಂನ ಮಾಜಿ ನಿರ್ದೇಶಕಿ ಡಾ. ಟಿ.ಕೆ. ಅನುರಾಧಾ ಉದ್ಘಾಟಿಸಿದರು.

ಆರಂಭವಾಗುತ್ತದೆ. ಮಕ್ಕಳಿಗೆ ಆಟಿಕೆ ನೀಡುವಾಗ ಹೆಣ್ಣು-ಗಂಡಿಗೆ ಬೇರೆ ಬೇರೆ ಆಯ್ಕೆ ಮಾಡಲಾಗುತ್ತದೆ. ಶಿಕ್ಷಣದಲ್ಲೂ ತಾರತಮ್ಯ ಮಾಡಲಾಗುತ್ತದೆ. ಮನೆಗೆಲಸದ ಮಹಿಳೆ ತನ್ನ ಗಂಡು ಮಗನನ್ನು ಕೆಲಸಕ್ಕಾಗಿ ಕರೆ ತಂದಿದ್ದನ್ನು ನೋಡಿಲ್ಲ. ಹೆಣ್ಣುಮಗಳನ್ನು ಕರೆತರುವುದನ್ನು ಮಾತ್ರ ಕಂಡಿದ್ದೇನೆ' ಎಂದರು.

ಉನ್ನತ ಕಲಿಕೆ ವಿಷಯ ಬಂದಾಗಲೂ ಹೆಣ್ಣಿನ ಆಯ್ಕೆಗಳು ಸೀಮಿತವಾಗುತ್ತವೆ. ಶೇ 50ಕ್ಕೂ ಹೆಚ್ಚು ಹೆಣ್ಣುಮಕ್ಕಳು ಪದವಿ ಪಡೆಯುತ್ತಿದ್ದರೂ ಮುಂದೆ ಉದ್ಯೋಗ ಪಡೆಯುವವರು ಕಡಿಮೆ. ಸುಶಿಕ್ಷಿತ ಸಮಾಜದಲ್ಲಿದ್ದರೂ ಹೆಣ್ಣು ಮಕ್ಕಳ ಸುರಕ್ಷತೆ ಬಗ್ಗೆ ಕಳವಳ ತಪ್ಪಿಲ್ಲ. ಸಂಜೆ ಮಗಳು ವಾಪಸ್ ಬರುವುದು ಕೆಲವು ನಿಮಿಷ ತಡವಾದರೂ ತಾಯಂದಿರಿಗೆ ತಳಮಳ ಆರಂಭವಾಗುತ್ತದೆ ಎಂದರು.

ಸಾಮಾಜಿಕ ಕಾರ್ಯಕರ್ತರ ಪರಿಶ್ರಮ ಹಾಗೂ ಸರ್ಕಾರದ ನೀತಿಗಳಿಂದಾಗಿ ಮಹಿಳೆಯರಿಗೆ ಏಳು ದಶಕಗಳಲ್ಲಿ ಹೆಚ್ಚಿನ ಸ್ಥಾನಮಾನ ದೊರೆತಿವೆ. ಶಿಕ್ಷಣ ಹಾಗೂ ವೈದ್ಯಕೀಯ ವಲಯಗಳಲ್ಲಿ ಪ್ರಾತಿನಿಧ್ಯ ಹೆಚ್ಚಾಗಿದೆ. ಬೇರೆ ವಲಯಗಳಲ್ಲಿ ಈಗಲೂ ಮಹಿಳಾ ಪ್ರಾತಿನಿಧ್ಯ ಕಡಿಮೆ ಇದೆ ಎಂದರು.

ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ ಅಧ್ಯಕ್ಷತೆ ವಹಿಸಿದ್ದರು. ಬಿ.ಇ.ಎ. ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ, ಬೆಳಗಾವಿ ವಿ.ಟಿ.ಯು. ಮೌಲ್ಯಾಂಕನ ರಿಜಿಸ್ಟ್ರಾರ್ ಡಾ. ಬಿ.ಇ. ರಂಗಸ್ವಾಮಿ, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯ ಕಿರುವಾಡಿ ಗಿರಿಜಮ್ಮ, ಕಿರಣ್ ವಿಶ್ವೇಶ್ವರಯ್ಯ, ಕಾಲೇಜಿನ ವುಮೆನ್ಸ್ ಸೆಲ್ ಮುಖ್ಯಸ್ಥೆ ಆಶಾಲತಾ ಇದ್ದರು.

ಡಾ.ಸಿ.ಆರ್. ನಿರ್ಮಲ ಸ್ವಾಗತಿಸಿದರು. ಡಿ.ಪಿ. ಪ್ರಿಯಾಂಕ, ಬಿ. ಪ್ರಿಯ ನಿರೂಪಿಸಿದರು. ಎಚ್.ಎಚ್. ವಿಜಯಲಕ್ಷ್ಮಿ ವಂದಿಸಿದರು.

vijayakarnataka 15-03-2022

# ಮನೆಯಿಂದಲೇ ಅಸಮಾನತೆ ಆರಂಭ

■ **ವಿಕ ಸುದ್ದಿಲೋಕ** ದಾವಣಗೆರೆ

ಪುರುಷನೇ ಕಟ್ಟಿಕೊಂಡ ಸಮಾಜದಲ್ಲಿ ಮಹಿಳೆಗೆ ಎಂದೂ ಸಮಾನತೆ ದೊರೆತಿಲ್ಲ, ಮನೆಯಲ್ಲಿ ಆರಂಭವಾಗುವ ಅಸಮಾನತೆ, ಸಮಾಜದ ಎಲ್ಲಾ ಕ್ಷೇತ್ರ ಹಾಗೂ ಆಕೆ ಉದ್ಯೋಗ ಮಾಡುವ ಸ್ಥಳಕ್ಕೂ ವಿಸ್ತರಣೆಯಾಗಿದೆ ಎಂದು ಇಸ್ರೋ ವಿಜ್ಞಾನಿ ಡಾ.ಟಿ.ಕೆ. ಅನುರಾಧಾ ಬೇಸರ ವ್ಯಕ್ತಪಡಿಸಿದರು.

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಕಾಲೇಜಿನ ಮಹಿಳಾ ಕೋಶ ಸೋಮವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿ, ಮನೆಯಲ್ಲಿ ಮಕ್ಕಳಿಗೆ ಕೊಡಿಸುವ ಆಟಿಕೆ, ಬಟ್ಟೆ, ಶಾಲೆಗೆ ಸೇರಿಸುವುದು ಸೇರಿ ಪ್ರತಿ ವಿಷಯದಲ್ಲೂ ಅಸಮಾನತೆ ಕಾಣಸಿಗುತ್ತದೆ ಎಂದರು.

ಮನೆಯಿಂದ ಆರಂಭವಾಗಿ, ಸಾಮಾಜಿಕ ಹಾಗೂ ವೃತ್ತಿ ಜೀವನದ ಪ್ರತಿ ಹಂತದಲ್ಲಿ ಎದುರಾಗುವ ಅಸಮಾನತೆ ಸವಾಲುಗಳ ನಿವಾರಣೆಗೆ ಮಹಿಳೆಯೇ ಶ್ರಮಿಸಬೇಕಿದೆ. ಎಲ್ಲಾ ವಿಷಯದಲ್ಲೂ ಮಹಿಳೆ ಪುರುಷನಿಗೆ ಸಮಾನಳು ಎಂದು ಯಾರೂ ಕರೆದು ಉನ್ನತ, ಸಮಾನ ಸ್ಥಾನ ನೀಡುವುದಿಲ್ಲ, ಕೆಲಸದ ಸ್ಥಳದಲ್ಲಿ ಗೌರವ, ಸುರಕ್ಷತೆ ಹೆಸರಿನಲ್ಲಿ ಸ್ತ್ರೀಯನ್ನು ಕಟ್ಟಿಹಾಕಲಾಗಿದೆ. ಕೆಲಸದ ಸ್ಥಳದಲ್ಲಿ ಅಸಮಾನತೆ ನಿವಾರಿಸುವ ನಿಟ್ಟಿನಲ್ಲಿ ಪುರುಷ ಸಹೋದ್ಯೋಗಿಗಳು ತಮ್ಮ ಮನೋಭಾವ ಬದಲಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಡಾ.ಪ್ರಭಾ ಮಲ್ಲಿಕಾರ್ಜುನ ಹಾಗೂ ಡಾ.ಟಿ.ಕೆ. ಅನುರಾಧಾ ಅವರನ್ನು ಸನ್ಮಾನಿಸಲಾಯಿತು. ಬಿಐಇಟಿ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೌಲ್ಯಾಂಕನ ರಿಜಿಸ್ಟ್ರಾರ್ ಡಾ.ಬಿ.ಇ. ರಂಗಸ್ವಾಮಿ, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ಕಿರಣ್ ವಿಶ್ವೇಶ್ವರಯ್ಯ, ಮಹಿಳಾ ಕೋಶದ ಮುಖ್ಯಸ್ಥೆ ಆಶಾಲತಾ, ಡಾ. ಸಿ.ಆರ್. ನಿರ್ಮಲಾ, ಡಾ. ವೀಣಾ ಇತರರಿದ್ದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮದಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ ಅವರನ್ನು ಸನ್ಮಾನಿಸಲಾಯಿತು. ಇಸ್ರೋ ವಿಜ್ಞಾನಿ ಡಾ.ಟಿ.ಕೆ. ಅನುರಾಧಾ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ ಇತರರು ಇದ್ದರು.

# ಪ್ರತಿ ಕ್ಷೇತ್ರದಲ್ಲಿ ಮಹಿಳಾ ಸಮಾನತೆ ಅಗತ್ಯ

Udayavani 15-03-2022



**ದಾವಣಗೆರೆ: ಬಿಐಇಟಿಯಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಇಸ್ರೋ ವಿಜ್ಞಾನಿ ಡಾ। ಅನುರಾಧ ಅವರನ್ನು ಸನ್ಮಾನಿಸಲಾಯಿತು.**

ದಾವಣಗೆರೆ: ಮೊದಲಿಗಿಂತಲೂ ಈಗ ಕೆಲವು ರಂಗಗಳಲ್ಲಿ ಮಹಿಳೆಗೆ ಸಮಾನತೆ ಸಿಗುತ್ತಿದ್ದರೂ ಎಲ್ಲಾ ರಂಗಗಳಲ್ಲಿ ಇನ್ನೂ ಮಹಿಳೆಗೆ ಸಮಾನತೆ ಸಿಗಬೇಕಾಗಿದೆ ಎಂದು ಇಸ್ರೋ ವಿಜ್ಞಾನಿ ಡಾ। ಟಿ.ಕೆ. ಅನುರಾಧ ಅಭಿಪ್ರಾಯಪಟ್ಟರು.

ನಗರದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣು ಸಮಾಜದ ಕಣ್ಣು ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನುಡಿಮುತ್ತುಗಳನ್ನು ಕೇಳುತ್ತೇವೆ. ಆದರೆ ಸಮಾಜದಲ್ಲಿ ಮಹಿಳೆಗೆ ಸಲ್ಲಬೇಕಾದಗೌರವ ಮತ್ತು ಸಮಾನತೆ ದೊರೆಯಬೇಕಾದರೆ ಎಲ್ಲ ರಂಗಗಳಲ್ಲೂ ಮಹಿಳೆಗೆ ಪ್ರಾತಿನಿಧ್ಯ ಅವಶ್ಯಕ ಎಂದು ಪ್ರತಿಪಾದಿಸಿದರು. ಸಮಾಜದ ಗಮನ ಸೆಳೆಯಲು ಪ್ರತಿ ವರ್ಷ ಮಹಿಳಾ ದಿನವನ್ನುಆಚರಿಸಲಾಗುತ್ತದೆ. ಈ ವರ್ಷ 'ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ' ಎಂಬ ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಡಾ। ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಡಾ। ಅನುರಾಧ ಶ್ರೇಷ್ಠ ವಿಜ್ಞಾನಿಯಾಗಿದ್ದಾರೆ. ವಿದ್ಯಾರ್ಥಿಗಳು ಅವರಿಂದ ಬಹಳಷ್ಟು ಕಲಿಯಬೇಕಿದೆ ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಉಪಾಧ್ಯಕ್ಷೆ ಕಿರುವಾಡಿ ಗಿರಿಜಮ್ಮ, ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಡಾ। ಬಿ.ಇ. ರಂಗಸ್ವಾಮಿ, ಬಿಇಎಲ್ ನಿವೃತ್ತ ಪ್ರಧಾನ ವ್ಯವಸ್ಥಾಪಕ ಕಿರಣ ವಿಶ್ವೇಶ್ವರಯ್ಯ, ಕಾಲೇಜಿನ ನಿರ್ದೇಶಕ ಪ್ರೊ। ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ। ಎಚ್.ಬಿ. ಅರವಿಂದ್, ಡಾ। ಜೆ.ಪಿ. ದೇಸಾಯಿ ಇತರರು ಭಾಗವಹಿಸಿದ್ದರು.